ಅಸಲು ದಾವೆ ನಂಃ 358/2020 ಡಿ.ಡಬ್ಲ್ಯೂಃ1-ಲಕ್ಷ್ಮವ್ವ ತಿಪ್ಪಣ್ಣ ಕಲ್ಲಾಪೂರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 07/01/2026 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ PKU ವಕೀಲರಿಂದಃ**

1. ನಾನು ಮೇಲ್ಮಠ ಗ್ರಾಮದಲ್ಲಿ ಸುಮಾರು 60 ವರ್ಷಗಳಿಂದ ವಾಸವಾಗಿರುತ್ತೇನೆ. ನನಗೆ ಈಗ ವಯಸ್ಸು 60 ವರ್ಷ. ನನ್ನ ಗಂಡ 5-6 ವರ್ಷಗಳ ಹಿಂದೆ ನಿಧನರಾಗಿರುತ್ತಾರೆ. ನನ್ನ ಮಾವನ ಹೆಸರು ಸಿದ್ದಪ್ಪ ಕಲ್ಲಾಪೂರ ಎಂದರೆ ಸರಿ. ನನ್ನ ಮಾವನವರು ಸಹ ಶಾಶ್ವತವಾಗಿ ಮೇಲ್ಮಠ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿ. ಸಿದ್ದಪ್ಪ ರವರು ವ್ಯವಸಾಯ ಮಾಡುವುದನ್ನು ಬಿಟ್ಟು ಬೇರೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಿದ್ದಪ್ಪ ರವರಿಗೆ ಆರು ಜನ ಮಕ್ಕಳು. ಸಿದ್ದಪ್ಪ ರವರ ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಸಿದ್ದಪ್ಪ ರವರಿಗೆ ಮೇಲ್ಮಠಗ್ರಾಮದಲ್ಲಿ ಎರಡು ಮನೆಗಳು ಇದ್ದವು ಎಂದರೆ ಸರಿ. ಸದರಿ ಮನೆಗಳ ನಂಬರ ನನಗೆ ಗೊತ್ತಿಲ್ಲ. ಸದರಿ ಮನೆಗಳ ನಂಬರ ವಿ.ಪಿ.ಸಿ.38 ಮತ್ತು ವಿ.ಪಿ.ಸಿ. ನಂಬರ 60 ಎಂದರೆ ನನಗೆ ಗೊತ್ತಿಲ್ಲ. ಸಿದ್ದಪ್ಪ ರವರಿಗೆ ಅಸೂಟಿ ಗ್ರಾಮದಲ್ಲಿ ಆಸ್ತಿಗಳು ಇರುತ್ತವೆ ಎಂದರೆ ಸರಿ. ಅಸೂಟಿ ಗ್ರಾಮದಲ್ಲಿ ಇರುವ ಆಸ್ತಿಗಳು ಸಿದ್ದಪ್ಪ ರವರಿಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಗಳಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಅಸೂಟಿ ಗ್ರಾಮದಲ್ಲಿ ಇರುವ ಆಸ್ತಿಗಳ ಸರ್ವೆ ನಂಬರ ನನಗೆ ಗೊತ್ತಿಲ್ಲ. ವಾದಿಯು ಸಿದ್ದಪ್ಪ ರವರ ಮಗ ಎಂದರೆ ಸರಿ. ವಾದಿಯವರು ಅಸೂಟಿ ಗ್ರಾಮದಲ್ಲಿ ಇರುವ ಆಸ್ತಿಗಳು ಮತ್ತು ಮೇಲ್ಮಠಗ್ರಾಮದಲ್ಲಿ ಇರುವ ಎರಡು ಮನೆಗಳಿಗೆ ಸಂಬಂಧಿಸಿದಂತೆ ದಾವೆಯನ್ನು ದಾಖಲು ಮಾಡಿರುತ್ತಾರೆಂದರೆ ಸರಿ. ವಾದಿಯವರು ಸದರಿ ದಾವಾ ಆಸ್ತಿಗಳ ಮೇಲೆ ಪಾಲುವಿಭಾಗ ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆಂದರೆ ಸರಿ. ಸಿದ್ದಪ್ಪರವರ ಆರು ಜನ ಮಕ್ಕಳಲ್ಲಿ ಹನಮಪ್ಪ ರವರು ನಿಧನರಾಗಿರುತ್ತಾರೆಂದರೆ ಸರಿ. ಹನಮಪ್ಪ ರವರಿಗೆ ಯಾವುದೇ ರೀತಿಯಿಂದ ಹೆಂಡತಿ ಮತ್ತು ಮಕ್ಕಳು ಇರುವುದಿಲ್ಲ ಎಂದರೆ ಸರಿ. ಸಿದ್ದಪ್ಪ ರವರು ಮರಣ ಹೊಂದಿದ ನಂತರ ಅವರ ಮಕ್ಕಳು ನಡುವೆ ಯಾವುದೇ ರೀತಿಯಿಂದ ಪಾಲುವಿಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. ಪಾಲುವಿಭಾಗ ಸುಮಾರು 20 ವರ್ಷಗಳ ಹಿಂದೆ ಆಗಿರುತ್ತದೆ. ಸದರಿ ಪಾಲುವಿಭಾಗ ಶಿವಾನಂದಪ್ಪ, ನಿಂಗಪ್ಪ, ತಿಪ್ಪಣ್ಣ ರವರ ನಡುವೆ ಆಗಿರುತ್ತದೆ. ಯಾವುದೇ ಪಾಲುವಿಭಾಗವಾಗದೇ ಇದ್ದರೂ ಸಹ ಪಾಲುವಿಭಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎಲ್ಲಾ ಕಾಗದ ಪತ್ರಗಳು ವಾದಿಯವರ ಹತ್ತಿರ ಇರುತ್ತವೆ ಎಂದು

ನುಡಿದಿರುತ್ತಾರೆ. ಪಾಲುವಿಭಾಗವಾಗಿರುವ ಬಗ್ಗೆ ನಮ್ಮ ಬಳಿ ಯಾವುದೇ ಕಾಗದ ಪತ್ರಗಳು ಇರುವುದಿಲ್ಲ. ವಾದಿಯವರಿಗೆ ಮತ್ತು ನನಗೆ ನ್ಯಾಯಾಲಯದಿಂದ ನಮ್ಮ ನಮ್ಮ ಹಿಸ್ಸಾಗಳನ್ನು ಪಡೆದುಕೊಳ್ಳಲು ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿಯಲ್ಲ.ಸಾಕ್ಷಿಯು ಮುಂದುವರೆದು ನಾವು ಖರ್ಚು ಮಾಡಿಕೊಂಡಿರುವುದು ಎಲ್ಲಿಗೆ ಹೋಗಬೇಕೆಂದು ನುಡಿದಿರುತ್ತಾರೆ.

**ಮುಂದುವರೆದ ಪಾಟೀ ಸವಾಲುಃ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.